ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005.

ವಿಷಯ: 'ಸಾಧಕರ ಪ್ರತೀಕ ಬಾಬೂ ಜಗಜೀವನರಾಮ್'ಎಂಬ ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು, ಇವರ ಪತ್ರ ದಿನಾಂಕ: 25-08-2021.

*****

**ಆದೇಶ ಸಂಖ್ಯೆ: ಡಿವಿ.7/60/2017-18, ದಿನಾಂಕ: 31- 08-2021**

ನಿರ್ದೇಶಕರು, ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು, ಇವರಿಗೆ ಕೇಂದ್ರದ ವತಿಯಿಂದ **'ಸಾಧಕರ ಪ್ರತೀಕ ಬಾಬೂ ಜಗಜೀವನರಾಮ್'** ಎಂಬ ವಿಷಯ ಕುರಿತು ದಿನಾಂಕ: 04-09-2021ರಂದು ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅನುಮತಿಸಿ, ಸದರಿ ಕಾರ್ಯಕ್ರಮಕ್ಕೆ ಅಂದಾಜು ವೆಚ್ಚ **ರೂ. 13,500/-** ಗಳನ್ನು (ಹದಿಮೂರು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ನಿಯಮಾನುಸಾರ ಈ ಕೆಳಕಂಡಂತೆ ಉಪಯೋಗಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ.ಸಂ. | ವಿವರಗಳು | ಮೊತ್ತ ರೂ.ಗಳಲ್ಲಿ |
|---|---|---|
| 1. | ಆಹ್ವಾನ ಪತ್ರಿಕೆ, ಸರ್ಟಿಫಿಕೇಟ್ ಮತ್ತು ಫ್ಲೆಕ್ಸ್ ವೆಚ್ಚ | 1,500-00 |
| 2. | ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ನೀಡಲು ಊಟ ಸರಬರಾಜು ವೆಚ್ಚ ಮತ್ತು ಕಾಫಿ/ಟೀ ಜೊತೆಗೆ ಬಿಸ್ಕತ್ | 11,500-00 |
| 3. | ಇತರೆ | 500-00 |
| | **ಒಟ್ಟು ಮೊತ್ತ** | **13,500-00** |

ಮೇಲ್ಕಂಡ ವೆಚ್ಚವನ್ನು 2021-22ನೇ ಸಾಲಿನ ಆಯವ್ಯಯದಲ್ಲಿ ಕೇಂದ್ರ ಚಟುವಟಿಕೆಗಳು **'ಶೀರ್ಷಿಕೆ-260'**ಕ್ಕೆ ಮೀಸಲಿರಿಸಿರುವ ಒಂದು ಲಕ್ಷ ರೂ.ಗಳಲ್ಲಿ ಭರಿಸುವುದು.

ಆದೇಶದ ಮೇರೆಗೆ,

31/8/2021

ಕುಲಸಚಿವ.

ಗೆ:

1. ನಿರ್ದೇಶಕರು, ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸರ್ಕಾರಿ ಲೆಕ್ಕಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಮಾನ್ಯ ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.

DV-7, E//Chairsletts/MBR



**ಮೈಸೂರು ವಿಶ್ವವಿದ್ಯಾನಿಲಯ**
**ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರ**
**ಮಾನಸಗಂಗೋತ್ರಿ, ಮೈಸೂರು**

## "ಯಶಸ್ಸಿನ ಪ್ರತೀಕ ಬಾಬೂ ಜಗಜೀವನರಾಮ್" ಎಂಬ ವಿಷಯವನ್ನು ಕುರಿತು ಒಂದು ದಿನದ ವಿಚಾರ ಸಂಕಿರಣ
## One Day Seminar on "Babu Jagjivanram a symbol of Success"

ಉದ್ಘಾಟನೆ ಹಾಗೂ ಅಧ್ಯಕ್ಷತೆ : **ಪ್ರೊ. ಜಿ. ಹೇಮಂತ ಕುಮಾರ್**
ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುಖ್ಯ ಅತಿಥಿ : **ಡಾ|| ಕೆ. ಹೆಚ್. ಪ್ರಸಾದ್**
ಮಾನ್ಯ ಜಿಲ್ಲಾ ಆರೋಗ್ಯ ಅಧಿಕಾರಿಗಳು, ಮೈಸೂರು

ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ : **ಪ್ರೊ. ಕೆ. ಸದಾಶಿವ**
ನಿರ್ದೇಶಕರು,
ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮೈಸೂರು

ಉಪಸ್ಥಿತಿ : **ಪ್ರೊ. ಸಿ. ರಾಮಸ್ವಾಮಿ**
ಸಂದರ್ಶಕ ಪ್ರಾಧ್ಯಾಪಕರು,
ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮೈಸೂರು

ದಿನಾಂಕ: 04-09-2021 ಶನಿವಾರ ಸಮಯ: ಬೆಳಗ್ಗೆ 10.30
ಸ್ಥಳ: ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಮೈಸೂರು

ವಿಷಯ 1 : ಬಾಬೂ ಜಗಜೀವನರಾಮ್ ಜೀವನ ಮತ್ತು ವ್ಯಕ್ತಿತ್ವ 11.30–1.30
ಮಂಡನೆ : ಡಾ. ಸಿ. ರಾಮಸ್ವಾಮಿ
ಸಂದರ್ಶಕ ಪ್ರಾಧ್ಯಾಪಕರು, ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮೈಸೂರು

ವಿಷಯ 2 : ಸಚಿವರಾಗಿ ಬಾಬೂ ಜಗಜೀವನರಾಮ್‌ರವರ ಸಾಧನೆಗಳು
ಮಂಡನೆ : ಡಾ. ಎಂ. ಶ್ರೀನಿವಾಸಮೂರ್ತಿ
ಸಂಶೋಧನಾ ಅಧಿಕಾರಿ, ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮೈಸೂರು

ವಿಷಯ 3 : ಆಧುನಿಕ ಭಾರತದ ರಾಜಕಾರಣಕ್ಕೆ ಬಾಬೂಜಿಯವರ ಕೊಡುಗೆಗಳು
ಮಂಡನೆ : ಡಾ. ಕೆ. ಸದಾಶಿವ
ನಿರ್ದೇಶಕರು, ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರ, ಮೈಸೂರು

**ಸರ್ವರಿಗೂ ಆದರದ ಸ್ವಾಗತ**

ನಿರ್ದೇಶಕರು, ಸಂದರ್ಶಕ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗ
ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಸಂಶೋಧನ ಮತ್ತು ವಿಸ್ತರಣ ಕೇಂದ್ರ, ಮೈಸೂರು

ವಿಶೇಷ ಸೂಚನೆ: ಕಾರ್ಯಕ್ರಮವನ್ನು ಕೋವಿಡ್-19 ನಿಯಮಾನುಸಾರ ಮಾಸ್ಕ್ ಮತ್ತು ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿರುತ್ತದೆ

ಕುವೆಂಪು ವಿಶ್ವವಿದ್ಯಾಲಯದ ಡಾ. ಬಾಬು ಜಗಜೀವನರಾಂ ಅಧ್ಯಯನ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ, ಜ್ಞಾನಸಹ್ಯಾದ್ರಿ, ಕುವೆಂಪು ಇವರ ವತಿಯಿಂದ "ಆಧುನಿಕ ಭಾರತದ ಬಾಬು ಜಗಜೀವನರಾಂ" ಎಂಬ ವಿಷಯವನ್ನು ಕುರಿತು ಒಂದು ದಿನದ ವಿಚಾರ ಸಂಕಿರಣವನ್ನು ದಿನಾಂಕ: 04-09-2021ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹಾಜರಿದ್ದ ಹೆಸರು ಮತ್ತು ಸಹಿ ಕೆಳಗಿನಂತಿದೆ.

1. ಪ್ರೊ. ಬಿ. ಹೇಮಂತ್ ಕುಮಾರ್
   ಮಾನ್ಯ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಕುವೆಂಪು

2. ಡಾ|| ಕೆ. ಹೆಚ್. ಪ್ರಸಾದ್
   ಮಾನ್ಯ ಜಿಲ್ಲಾ ಆರೋಗ್ಯ ಅಧಿಕಾರಿಗಳು, ಕುವೆಂಪು

3. ಪ್ರೊ. ಕೆ. ಸದಾಶಿವ
   ನಿರ್ದೇಶಕರು, ಬಾಬು ಜಗಜೀವನರಾಂ ಅಧ್ಯಯನ ಕೇಂದ್ರ, ಕುವೆಂಪು

4. ಪ್ರೊ. ಸಿ. ರಾಮಸ್ವಾಮಿ
   ಸಂದರ್ಶಕ ಪ್ರಾಧ್ಯಾಪಕರು

5. ಡಾ. ಎಂ. ಶ್ರೀನಿವಾಸನಾಯಕ
   ಸಂಶೋಧನ ಅಧಿಕಾರಿ

6. ಎನ್. ಆರ್. ಮಧುಸೂದನ್

7. ಜೆ. ಸೋಮಶೇಖರಪ್ಪ.

8. ಎಸ್. ನರೇಂದ್ರಕುಮಾರ್

9. ಎಂ. ರಾಜಪ್ಪ

10. ಡಾ. ಶಿವಶಂಕರ್ . ಎಂ
11 ಡಾ. ಮಲ್ಲಿಕಾರ್ಜುನ ಸ್ವಾಮಿ
12 NAVEEN KUMAR
(MOB - NO - 8277146282)



Received the Guest Dr. K.H. Prasad, District Health and Family welfare Office, Mysuru on 04-09-2021



Received the our Honorable Vice-Chancellor, University of Mysore on 04-09-2021




Dr. M. Sreenivasa Murthy Welcome Guests on Stage on 04-09-2021




Miss Harinaskshi Singing a song in the function held on 04-09-2021



Audience participated in the function organised on 04-09-2021



Audience participated in the function organised on 04-09-2021




Function Inagurated by our Honarable Vice-chancellor Prof. G. Hemanath kumar, Director of the Centre Prof. K. Sadashiva, Visiting Professor Prof. C. Ramaswamy and Research Officer Dr. M. Sreenivasa Murthy




Prof. C. Ramaswamy gifted the set of books(12 Volumes) to Honarable Vice-chancellor Prof. G. Hemanth Kumar




Prof. C. Ramaswamy Honaring to Vice-chancellor, Prof. G. Hemanth Kumar

ಆಂದೋಲನ

# ‘ಮಹನೀಯರನು ಜಾತಿ ನೆಲೆಯಲ್ಲಿ ಗುರುತಿಸುವುದು ದುರಂತ’

## ‘ಯಶಸ್ಸಿನ ಪ್ರತೀಕ ಬಾಬೂ ಜಗಜೀವನರಾಮ್’ ವಿಚಾರ ಸಂಕಿರಣ ಉದ್ಘಾಟನೆ

ಮೈಸೂರು: ದೇಶಕ್ಕಾಗಿ ದುಡಿದ ಮಹನೀಯರನ್ನು ಇಂದಿನ ಸಮಾಜದಲ್ಲಿ ಜಾತಿಯ ನೆಲೆಯಲ್ಲಿ ಗುರುತಿಸುತ್ತಿರುವುದು ದುರಂತ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ವಿಷಾದಿಸಿದರು.

ಮೈಸೂರು ವಿವಿ ಡಾ.ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ ‘ಯಶಸ್ಸಿನ ಪ್ರತೀಕ ಬಾಬೂ ಜಗಜೀವನರಾಮ್’ ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಾಬೂ ಜಗಜೀವನರಾಮ್ ಭಾರತ ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ದಿ. ಶೋಷಿತರು ಹಾಗೂ ದಲಿತರ ದನಿಯಾಗಿದ್ದರು. ಗಾಂಧೀಜಿ ಅವರಿಂದಲೂ ಪ್ರಶಂಸೆ ಪಡೆದಿದ್ದರು. ಆದ್ದರಿಂದ ದೇಶಕ್ಕಾಗಿ ದುಡಿದ ಮಹನೀಯರನ್ನು ಜಾತಿಯ ನೆಲೆಯಲ್ಲಿ ಗುರುತಿಸ ಬೇಡಿ ಎಂದರು.

ಬಾಬೂ ಜಗಜೀವನರಾಮ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ರಾಮಸ್ವಾಮಿ, ಸಂಶೋಧನ ಅಧಿಕಾರಿ ಡಾ.ಎಂ.ಶ್ರೀನಿವಾಸಮೂರ್ತಿ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಡಾ. ಮೈಲಹಳ್ಳಿ ರೇವಣ್ಣ, ನರೇಂದ್ರ ಕುಮಾರ್ ಹಾಗೂ ಬಾಬೂಜಿ ಅಧ್ಯ ಯನ ಕೇಂದ್ರದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಂತರ ನಡೆದ ವಿಚಾರ ಸಂಕಿರಣದಲ್ಲಿ ‘ಬಾಬೂಜೀ ಜೀವನ ಮತ್ತು ವ್ಯಕ್ತಿತ್ವ’ ಕುರಿತು ಡಾ.ಸಿ. ರಾಮಸ್ವಾಮಿ, ‘ಸಚಿವರಾಗಿ ಬಾಬೂಜಿ ಅವರ ಸಾಧನೆಗಳು’ ಕುರಿತು ಡಾ.ಎಂ. ಶ್ರೀನಿವಾಸ್, ‘ಆಧುನಿಕ ಭಾರತ ರಾಜಕಾರಣಕ್ಕೆ ಬಾಬೂಜಿ ಅವರ ಕೊಡುಗೆಗಳು’ ಕುರಿತು ಡಾ. ಕೆ.ಸದಾಶಿವ ವಿಚಾರ ಮಂಡಿಸಿದರು.




**ಮೈಸೂರು ವಿವಿಯಿಂದ ಬಾಬೂ ಜಗಜೀವನರಾಮ್ ಅವರ ಕುರಿತಾಗಿ 5 ಸಂಪುಟಗಳನ್ನು ಹೊರತರಲಾಗಿದೆ. ಪರೀಕ್ಷಾ ಕಾರ್ಯಗಳು, ಘಟಿಕೋತ್ಸವ ಕಾರ್ಯಕ್ರಮಗಳೆಲ್ಲವೂ ಪೂರ್ಣಗೊಂಡ ನಂತರ ನವೆಂಬರ್ ಮಾಹೆಯಲ್ಲಿ ಸಂಪುಟಗಳನ್ನು ಲೋಕಾರ್ಪಣೆ ಗೊಳಿಸಲಾಗುವುದು.**

**– ಪ್ರೊ.ಜಿ.ಹೇಮಂತ್ ಕುಮಾರ್, ಕುಲಪತಿ, ಮೈವಿವಿ.**

Main Edition
Sep 8 2021 Page No. 6
Powered by : eReleGo.com

# ಶೋಷಿತರು, ದಲಿತರ ಧ್ವನಿಯಾಗಿದ್ದ ಡಾ.ಬಾಬೂಜಿ

## ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಬಣ್ಣನೆ

**ಮೈಸೂರು:** ಡಾ.ಬಾಬೂ ಜಗಜೀವನರಾಮ್ ಭಾರತ ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ಧಿಯಾಗಿದ್ದು ಶೋಷಿತರು ಹಾಗೂ ದಲಿತರ ಧ್ವನಿಯಾಗಿದ್ದರು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಯಶಸ್ವಿನ ಪ್ರತೀಕ ಬಾಬೂ ಜಗಜೀವನರಾಮ್ ಎಂಬ ವಿಷಯದ ಕುರಿತು ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆಧುನಿಕ ಭಾರತದ ರೂವಾರಿಗಳಲ್ಲಿ ಬಾಬೂಜಿ ಕೂಡ ಇಬ್ಬರು. ಮಹಾತ್ಮಾ ಗಾಂಧೀಜಿ ಅವರಿಂದ ಹೊಗಳಿಸಿಕೊಂಡಿದ್ದರು. ದೇಶಕ್ಕಾಗಿ ದುಡಿದ ಯಾವುದೇ ಮಹನೀಯರನ್ನು ಜಾತಿಯ ನೆಲೆಯಲ್ಲಿ ಗುರುತಿಸುವುದು ದುರಂತ. ಜಗಜೀವನ್ ರಾಮ್ ಒಬ್ಬ ಮಹಾನ್ ಸಂಘಟಕ, ಚಿಂತಕ ಮತ್ತು ರಾಜಕೀಯ ಮುತ್ಸದ್ಧಿಯಾಗಿ ದೇಶಕ್ಕೆ ಬೆಳಕನ್ನು ನೀಡಿದವರು. ಶೋಷಿತರ ಸಮಾಜದಿಂದ ಬಂದವರಿಗೆ ಮಾನವೀಯತೆ, ಹೃದಯವಂತಿಕೆ ಮತ್ತು ಸಮಾಜವನ್ನು ಮುನ್ನಡೆಸುವ ಚಿಂತನೆ ಇರುತ್ತದೆ ಎಂಬುದಕ್ಕೆ ಬಾಬೂಜಿ ಸಾಕ್ಷಿಯಾಗಿದ್ದಾರೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಯಶಸ್ವಿನ ಪ್ರತೀಕ ಬಾಬೂ ಜಗಜೀವನರಾಮ್ ಎಂಬ ವಿಷಯದ ಕುರಿತು ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಉದ್ಘಾಟಿಸಿದರು.

ಡಾ.ಬಾಬೂ ಜಗಜೀವನರಾಮ್ ಅವರು ರಾಷ್ಟ್ರೀಯ ನಾಯಕರಾಗಿ, ಶ್ರೇಷ್ಠ ಸಂಸದೀಯ ಪಟುವಾಗಿ, ಕೇಂದ್ರ ಮಂತ್ರಿ, ಉಪ ಪ್ರಧಾನಿ ಹಾಗೂ ದಲಿತ ಸಮುದಾಯಗಳ ಆಶಾಕಿರಣವಾಗಿ ಸುಮಾರು ಅರ್ಧ ಶತಮಾನಗಳ ಕಾಲ ಭಾರತದ ರಾಜಕಾರಣದ ಮೇಲೆ ತಮ್ಮ ಇರುವನ್ನು ಬಲವಾಗಿ ಪ್ರತಿಪಾದಿಸಿದರು. ಆದರ್ಶ, ಮೌಲ್ಯಭರಿತ ವಿಚಾರಗಳನ್ನು ತಮ್ಮ ರಾಜಕೀಯ ನಾಯಕತ್ವಕ್ಕೆ ಬೆರೆಸಿ ಭಾರತವನ್ನು ರಾಜಕೀಯ ಸಾಂವಿಧಾನಿಕ ಬೆಳವಣಿಗೆ ಮತ್ತು ಸಾಮಾಜಿಕ ಬದಲಾವಣೆ ತರಲು ಹಗಲಿರುಳು ಶ್ರಮಿಸಿದರು. ಹಲವು ಬಾರಿ ಸೆರೆಮನೆ ವಾಸ ಅನುಭವಿಸಿದರು ಹೋರಾಟದ ಕಿಚ್ಚನ್ನು ಬತ್ತಿಸಿಕೊಳ್ಳಲಿಲ್ಲ. ಹಿಂದೂ ಧರ್ಮದಲ್ಲಿದ್ದುಕೊಂಡೇ ಭಾರತದಲ್ಲಿ ಸಮ ಸಮಾಜವನ್ನು ಸ್ಥಾಪಿಸುವ ಮೂಲಕ ಅಸ್ಪೃಶ್ಯರನ್ನು ಹಾಗೂ ಭಾರತದ ಸಮಸ್ತ ಶೋಷಿತ ಸಮೂಹಗಳನ್ನು ವಿಮೋಚನೆಗೊಳಿಸಬೇಕೆಂದು ಪ್ರಯತ್ನಿಸಿದರು ಎಂದು ಹೇಳಿದರು.

ಧೀಮಂತ ರಾಷ್ಟ್ರನಾಯಕನ ನೆನಪು ಸದಾ ಹಸುರಾಗಿರಬೇಕು ಮತ್ತು ಅವರ ಚಿಂತನೆಗಳು ಮುಂದಿನ ಜನಾಂಗಕ್ಕೆ ಮಾರ್ಗದರ್ಶಿಯಾಗಿರಬೇಕು ಎಂಬ ಉದ್ದೇಶದಿಂದ ಕರ್ನಾಟಕ ಸರಕಾರ ಉದಾರ ನೆರವಿನೊಡನೆ ಡಾ.ಬಾಬೂ ಜಗಜೀವನರಾಮ್ ಅಧ್ಯಯನ ಪೀಠವನ್ನು ಮೈಸೂರು ವಿಶ್ವವಿದ್ಯಾಲಯ 2001ರಲ್ಲಿ ಸ್ಥಾಪನೆಗೊಂಡಿದೆ. ಈ ಕೇಂದ್ರದ ಆಶ್ರಯದಲ್ಲಿ ಬಾಬೂಜೀಯವರನ್ನು ಕುರಿತಂತೆ ಅಧ್ಯಯನ ಮತ್ತು ಸಂಶೋಧನ ಕಾರ್ಯಗಳು ನಡೆಯುತ್ತಿವೆ ಎಂದರು.

ಡಾ.ಬಾಬೂ ಜಗಜೀವನರಾಮ್ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ ಮಾತನಾಡಿ, ಬಾಬೂಜೀ ಕುರಿತಾಗಿ ಐದು ಸಂಪುಟಗಳನ್ನು ಸಿದ್ಧಪಡಿಸಲಾಗಿದೆ. ಅದರ ಬಿಡುಗಡೆಗೆ ಕ್ರಮ ವಹಿಸುವಂತೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿ ಪ್ರೊ.ಜಿ.ಹೇಮಂತ್ ಕುಮಾರ್, ಶೀಘ್ರ ಬಿಡುಗಡೆಗೆ ಕ್ರಮ ವಹಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ರಾಮಸ್ವಾಮಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಅಧ್ಯಕ್ಷ ಪ್ರೊ. ಜೆ.ಸೋಮಶೇಖರ್, ಸಂಶೋಧನಾಧಿಕಾರಿ ಎಂ.ಶ್ರೀನಿವಾಸ ಇದ್ದರು.

ಪ್ರಜಾವಾಣಿ ಪತ್ರಿಕೆ    ಬುಧವಾರ ಸೆಪ್ಟೆಂಬರ್ 8, 2021

ಪುಟ-3A
ಕಾಲಂ-2ರಿಂದ 4

# ಜಗಜೀವನರಾಮ್ ಮಹಾನ್ ಸಂಘಟಕ

ಪ್ರಜಾವಾಣಿ ವಾರ್ತೆ



ಮೈಸೂರು ವಿ.ವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರು ವಿಚಾರ ಸಂಕಿರಣ ಉದ್ಘಾಟಿಸಿದರು

**ಮೈಸೂರು:** 'ಜಗಜೀವನರಾಮ್ ಭಾರತ ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ದಿಗಳಲ್ಲೊಬ್ಬರು. ಶೋಷಿತರು ಹಾಗೂ ದಲಿತರ ಧ್ವನಿಯಾಗಿದ್ದ ಅವರು ಆಧುನಿಕ ಭಾರತದ ನಿರ್ಮಾಣದಲ್ಲೂ ಪಾತ್ರ ವಹಿಸಿದ್ದರು' ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಹೇಳಿದರು.

ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರವು 'ಯಶಸ್ವಿನ ಪ್ರತೀಕ ಬಾಬು ಜಗಜೀವನರಾಮ್' ವಿಷಯದ ಕುರಿತು ಈಚೆಗೆ ನಡೆದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಕೇಂದ್ರದ ನಿರ್ದೇಶಕ ಪ್ರೊ. ಕೆ.ಸದಾಶಿವ, ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ರಾಮಸ್ವಾಮಿ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕ ಪ್ರೊ. ಜೆ.ಸೋಮಶೇಖರ್ ಇದ್ದರು.